ಎನ್. ಆರ್. ಇ. ಪಿ. ಹಾಗೂ ಆರ್.ಎಲ್.ಇ.ಜಿ.ಪಿ. ನಿಧಿಗಳ ದುರುಪಯೋಗದ ಬಗ್ಗೆ

೩೪೯. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯಂತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಎನ್. ಆರ್. ಇ. ಪಿ. ಹಾಗೂ ಆರ್. ಎಲ್. ಇ. ಜಿ. ಪಿ. ಯ ಯೋಜನೆಯ ಹಣವನ್ನು ಜಿಲ್ಲಾ ಪರಿಷತ್ ಕಟ್ಟಡ, ಪಿಠೋಪಕರಣ ಖರೀದಿಗೆ ವಾಹನಗಳ ಖರೀದಿಗೆ ಉಪಯೋಗಿಸುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಸದರೀ ಖರೀದಿಗಳಿಗೆ ಸರ್ಕಾರವು ಅನುಮತಿ ನೀಡಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಅಧಿಕಾರ ದುರುಪಯೋಗ ಪಡಿಸಿದ ಅಧಿಕಾರಿಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಅಬ್ದುಲ್ ನಜೀರ್‌ಸಾಬ್.—(ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ದಕ್ಷಿಣ ಕನ್ನಡ, ಬೀದರ್, ಮತ್ತು ತುಮಕೂರು ಈ ಜಿಲ್ಲಾಪರಿಷತ್‌ನವರು ಸ್ವಲ್ಪ ಹಣವನ್ನು ಮಾತ್ರ ಖರ್ಚು ಮಾಡಿರುತ್ತಾರೆ. ಉಳಿದ ಜಿಲ್ಲಾಪರಿಷತ್‌ದವರು ಯಾರೂ ಹಣವನ್ನು ಉಪಯೋಗಿಸಿರುವುದಿಲ್ಲ.

ಆ) ಭಾರತ ಸರ್ಕಾರದ ಎನ್. ಆರ್. ಇ. ಪಿ. ಮತ್ತು ಆರ್. ಎಲ್. ಇ. ಜಿ. ಪಿ. ಯೋಜನೆಗಳ ಕೈಪಿಡಿಗಳ ಪ್ರಕಾರ ಶೇಕಡಾ ೫ನ್ನು ಆಡಳಿತದ ಉಪಯೋಗಕ್ಕಾಗಿ ಉಪಯೋಗಿಸಲು ಆದೇಶ ವಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಪಂಪಾಪತಿ.—ಜಿಲ್ಲಾ ಪರಿಷತ್ತಿನಲ್ಲಿ ಎಲ್‌ಆರ್ ಜಿ ಪಿ ಮತ್ತು ಐ ಆರ್ ಡಿ ಪಿ ಯೋಜನೆಯ ಹಣವನ್ನು ಯಾವ ಕಾರ್ಯಕ್ಕೆ ಉಪಯೋಗ ಮಾಡಬೇಕಾಗಿತ್ತೋ ಅದನ್ನು ಬಿಟ್ಟು ಅವರ ವಾಹನಗಳು ಮಂತ್ತು ಅವರಿಗೆ ಬೇಕಾದಂತಹ ಫರ್ನೀಚರ್ಸ್ ಇಂಥಾದ್ದಕ್ಕೆ ಹೆಚ್ಚು ಖರ್ಚು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅದನ್ನು ದಯವಿಟ್ಟು ಕಡಿಮೆ ಮಾಡಿಸಿ ಬರಗಾಲ ಪರಿಸ್ಥಿತಿಯಲ್ಲಿ ಯಾವ ಉದ್ದೇಶಕ್ಕೆ ಖರ್ಚು ಮಾಡಬೇಕೋ ಅದಕ್ಕೆ ಖರ್ಚು ಮಾಡುವಂತೆ ಸಲಹೆಯನ್ನು ಕೊಡುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.—ಇದರ ಬಗ್ಗೆ ಈಗಾಗಲೇ ನಿರ್ದೇಶನ ಇದೆ. ಶೇಕಡ ೫ ರಷ್ಟು ವಾಹನಗಳಿಗೆ ಖರ್ಚು ಮಾಡಬೇಕೆಂದು. ಅವರೂ ಕೂಡ ಅದರೊಳಗೇ ಖರ್ಚು ಮಾಡಿದ್ದಾರೆ, ವಾಹನಗಳನ್ನು ಕೊಂಡು ಕೊಂಡಿರುವುದು ಕೂಡ ಅವರಿಗೆ ಬರುವ ಹಣದಲ್ಲಿ ರೀ ಇಂಬರ್ಸ್ ಮಾಡಿದ್ದಾರೆ. ಈ ಹಣದಲ್ಲಿ ಬೇರೆಯದಕ್ಕೆ ಖರ್ಚು ಮಾಡಿದ್ದಾರೆ ಎಂದು ಏನಾ ಮಾನ್ಯ ಸದಸ್ಯರು ಅನುಮಾನವನ್ನು ವ್ಯಕ್ತಪಡಿಸುತ್ತಿದ್ದಾರೆ ಅದಕ್ಕೆ ಅಸ್ಪದ ಬೇಡ ಇದರ ಬಗ್ಗೆ ಮಂತ್ರಿಯವರಿಗೆ ಆದೇಶ ಕೊಡುತ್ತೇನೆ.

ಹರಪನಹಳ್ಳಿ ಗೃಹ ನಿರ್ಮಾಣ ಮಂಡಳಿಯಿಂದ ಕಟ್ಟಿಸಿದ ಮನೆಗಳ ವೆಚ್ಚ.

೩೫೦. ಶ್ರೀ ಬಿ.ಎಚ್. ಯಂಕನಾಯ್ಕ (ಹರಪನಹಳ್ಳಿ).—ಮಾನ್ಯ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆ ಹರಪನಹಳ್ಳಿಯಲ್ಲಿ ಗೃಹ ನಿರ್ಮಾಣ ಮಂಡಳಿಯಿಂದ ಮನೆ ಕಟ್ಟಿರುವುದು ನಿಜವಲ್ಲವೆ ?

ಆ) ಆ ಬಗ್ಗೆ ಮೊದಲು ಪತ್ರಿಕೆ ಮತ್ತು ರಾಜ್ಯ ಪತ್ರದಲ್ಲಿ ೧೪,೦೦೦ ಎಂದು ನಮೂದಿಸಿದ ನಂತರ ೨೩,೦೦೦ಕ್ಕೆ ಏರಿಸಲಾಗಿದ್ದು ನಿಜವಲ್ಲವೆ ?